(4) ಉಳ್ಳಾಲ ನಗರ ಪಂಚಾಯಿತಿಯ ಖಾತೆ ಬದಲಾವಣೆಗೆ ನಗರಾಭಿವೃದ್ಧಿ ಇಲಾಖೆಯಿಂದ ಸೂಕ್ತ ನಿರ್ದೇಶನ ಮಹಾಲೇಖಪಾಲರಿಗೆ ನೀಡುವ ಬಗ್ಗೆ.

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಉಪಾಧ್ಯಕ್ಷರೆ, ಉಳ್ಳಾಲ ನಗರ ಪಂಚಾಯತ್ ಇಷ್ಟರ ತನಕ ಅಧಿಸೂಚನೆ ಪ್ರದೇಶವಾಗಿದ್ದು, ಕಳೆದ ವರ್ಷ ನಗರ ಪಂಚಾಯತ್ ಆಗಿ ಪರಿವರ್ತನೆ ಗೊಂಡಿರುತ್ತೆ. ಆದರೆ ಉಳ್ಳಾಲ ನಗರ ಪಂಚಾಯತ್‌ನ ವತಿಯಿಂದ ಖಾತೆಯ ಬದಲಾವಣೆಯ ಬಗ್ಗೆ ನಗರಾಭಿವೃದ್ಧಿ ಇಲಾಖೆ, ಬೆಂಗಳೂರಿನಲ್ಲಿರುವ ಮಹಾಲೇಖಪಾಲರಿಗೆ ಅಧಿಕೃತ ದಾಖಲಾತಿ ವಿವರಗಳನ್ನು ನೀಡಿರುವುದರಿಂದ ಉಳ್ಳಾಲ ನಗರ ಪಂಚಾಯತ್ ಮಂಗಳೂರಿನಲ್ಲಿರುವ ಖಜಾನೆಯಲ್ಲಿ ತನ್ನ ಖಾತೆ ಬದಲಾವಣೆಯನ್ನು ಮಾಡಲು ಸದರಿ ಅಧಿಕಾರಿಗಳು ವಿಫಲರಾಗಿರುವರು. ಪರಿಣಾಮವಾಗಿ ಉಳ್ಳಾಲ ನಗರ ಪಂಚಾಯತ್‌ನ ದೈನಂದಿನ ಆಡಳಿತಾತೀ ಕೆಲಸಗಳಿಗೆ ಹಾಗೂ ಅಭಿವೃದ್ಧಿ ಕಾಮಗಾರಿಗಳು ತೆಗೆದುಕೊಳ್ಳುವುದೆ ತೊಂದರೆಯಾಗಿದ್ದು. ಉಳ್ಳಾಲ ನಗರ ಪಂಚಾಯಿತಿ ಖಾತೆ ಬದಲಾವಣೆ ಮಾಡಲು ನಗರಾಭಿವೃದ್ಧಿ ಇಲಾಕೆಯಿಂದ ಸೂಕ್ತ ನಿರ್ದೇಶನವನ್ನು ಮಹಾಲೇಖಪಾಲರಿಗೆ ನೀಡಿ ಸರಿಯಾದ ವ್ಯವಸ್ಥೆ ಮಾಡಿಕೊಡಬೇಕೆಂದು ರಾಜ್ಯ ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಮೀರಾಜುದ್ದೀನ ಪಾಟೀಲ್: (ಪೌರಾಡಳಿತ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ರಾಜ್ಯದಲ್ಲಿ 171 ಸಾರ್ವಜಿಕ ಆಸ್ಪತ್ರೆಗಳಿದ್ದು ಅವುಗಳಲ್ಲಿ 96 ಆಸ್ಪತ್ರೆಗಳವರು ಔಷಧಿಗಳನ್ನು ಪಡೆದುಕೊಂಡು ಹೋಗಿರುತ್ತಾರೆ. ಉಳಿದ 75 ಸಾರ್ವಜನಿಕ ಆಸ್ಪತ್ರೆಗಳವರು ಇನ್ನೂ ಔಷಧಿಗಳನ್ನು ಪಡೆವಕೊಂಡು ಹೋಗಿರುದುಲ್ಲಿ ರಾಜ್ಯದ ಒಟ್ಟು 1609 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 312 ಪ್ರಾಥಮಿಕ ಆರೋಗ್ಯ ಕೇಂದ್ರಗಳವರು ಔಷಧಿಗಳನ್ನು ಪಡೆದುಕೊಂಡು ಹೋಗಿರುತ್ತಾರೆ. ಉಳಿದ 1197 ಪ್ರಾಥಮಿಕ ಆರೋಗ್ಯ ಕೇಂದ್ರಗಳವರು ಔಷಧಿಗಳನ್ನು ಪಡೆದುಕೊಂಡು ಹೋಗಿರುವುದಿಲ್ಲ. ಹಾಗೂ ರಾಜ್ಯದ ಒಟ್ಟು 558 ಪ್ರಾಥಮಿಕ ಆರೋಗ್ಯ ಘಟಕಗಳಿದ್ದು ಇವುಗಳಲ್ಲಿ 271 ಪ್ರಾಥಮಿಕ ಆರೋಗ್ಯ ಘಟಕದವರು ಔಷಧಿಗಳನ್ನು ಪಡೆದುಕೊಂಡು ಹೋಗಿರುತ್ತಾರೆ. ಇನ್ನುಳಿದ 287 ಪ್ರಾಥಮಿಕ ಆರೋಗ್ಯ ಘಟಕದವರು ಔಷಧಿಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ. ಔಷಧಿಗಳನ್ನು ತೆಗೆದುಕೊಂಡು ಹೋಗದೇ ಇರುವಂತ ಆಸ್ಪತ್ರೆ ಹಾಗೂ ಆರೋಗ್ಯ ಸಂಸ್ಥೆಗಳವರಿಗೆ ಈ ಮಳಿಗೆಯ ಸುತ್ತೋಲೆ ದಿನಾಂಕ 5-9-96 ಹಾಗೂ 25-11-96 ಹಾಗೂ 24-1-97ರ ತಂತಿ ಸಂದೇಶದಲ್ಲಿ ಕೂಡಲೇ ಅವರಿಗೆ ಬೇಕಾದ ಔಷಧಿಗಳನ್ನು ಪಡೆದುಕೊಂಡು ಹೋಗಲು ಸೂಚಿಸಲಾಗಿದೆ. ಅದರಂತೆ ಆರೋಗ್ಯ ಸಂಸ್ಥೆಯವರು ಈಗಲೂ ಔಷಧಿಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ.

ಕಳೆದ ಒಂದೂವರೆ ವರ್ಷದಿಂದ ಸಾರಿಗೆ ದರ ಗುತ್ತಿಗೆ ವ್ಯವಸ್ಥೆ ಇಲ್ಲದಿರುವ ಕಾರಣ ಆಯಾ ಆಸ್ಪತ್ರೆಗಳ ಮುಖ್ಯಸ್ಥರಿಗೆ ಅವರುಗಳಿಗೆ ಬೇಕಾದ ಔಷಧಿಗಳನ್ನು ಅವರೇ ಖುದ್ದಾಗಿ ಬಂದು ಅವರದೇ ಆದ ಸಾರಿಗೆ ಮುಖಾಂತರ ತೆಗೆದುಕೊಂಡು ಹೋಗಲು ಸೂಚಿಸಲಾಗಿತ್ತು. ಈ ರೀತಿಯಾಗಿ 679 ಆರೋಗ್ಯ ಸಂಸ್ಥೆಯವರು ಔಷಧಿಗಳನ್ನು ಪಡೆದುಕೊಂಡು ಹೋಗಿರುತ್ತಾರೆ,ಉಳಿದವರಿಗೂ ಮತ್ತೊಮ್ಮೆ ನೆನಪಿನೋಲೆ ಮುಖಾಂತರ ತಿಳಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 10 ಸಾರ್ವಜನಿಕ ಆಸ್ಪತ್ರೆಗಳಿದ್ದು ಅದರಲ್ಲಿ 5 ಸಾರ್ವಜನಿಕ ಆಸ್ಪತ್ರೆಗಳವರು ಈಗಾಗಲೇ ಔಷಧಿಗಳನ್ನ ತೆಗೆದುಕೊಂಡು ಹೋಗಿರುತ್ತಾರೆ. ಉಳಿದ 5 ಸಾರ್ವಜನಿಕ ಆಸ್ಪತ್ರೆಗಳವರಿಗೆ ಔಷಧಿಗಳನ್ನು ತೆಗೆದುಕೊಂಡು ಹೋಗಲು ತಂತಿ ಮುಖಾಂತರ ಸಂದೇಶ ಕೊಡಲಾಗಿದೆ. ಅದರಂತೆ 120 ಪ್ರಾ. ಆ. ಕೇಂದ್ರದವರಿಗೂ ಹಾಗೂ 4 ಪ್ರ. ಆ. ಘಟಕದವರಿಗೂ ಔಷಧಿಗಳನ್ನು ಪಡೆದುಕೊಂಡು ಹೋಗಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಮುಖಾಂತರ ತಂತಿ ಮೂಲಕ ಆದೇಶವನ್ನು ಕಳುಹಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಸಾರ್ವಜನಿಕ ಆಸ್ಪತ್ರೆಗೆ ವಾರ್ಷಿಕವಾಗಿ ಬಿಡುಗಡೆಯಾದ 7 ಲಕ್ಷ ಅನುದಾನದಲ್ಲಿ ಸರ್ಕಾರಿ ಔಷಧಿ ಮಳಿಗೆಯಿಂದ ಶೇ. 40 ರಂತೆ 2.8ಲಕ್ಷ ರೂಗಳ ಔಷಧಿಗಳನ್ನು ಪಡೆಯಲು ಅವರು ಅರ್ಹರಿರುತ್ತಾರೆ. ಆದರೆ 19-7-96 ರಲ್ಲಿ ಅವರು ಸಲ್ಲಿಸಿದ ಬೇಡಿಕೆ ಪಟ್ಟಿಯಲ್ಲಿ 4-20 ಲಕ್ಷ ರೂಗಳ ಔಷಧಿಗಳ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಮೇಲು ಸಹಿ ಮಾಡಿದ ಔಷಧಿಗಳ ಬೇಡಿಕೆ ಪಟ್ಟಿಯನ್ನು ಸರ್ಕಾರಿ ಔಷಧಿ ಮಳಿಗೆಗೆ ಸಲ್ಲಿಸಿರುತ್ತಾರೆ, ಆದರೆ ಅವರು 2.80 ಲಕ್ಷ ರೂಗಳ ಅನುದಾನದ ಮೊತ್ತಕ್ಕೆ ಔಷಧಿಗಳನ್ನು ಪಡೆಯಲು ಅವರು ಮರು ಬೇಡಿಕೆ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ. ಅದಕ್ಕೆ ದಿನಾಂಕ: 7-1-97 ರಂದು ಬರೆದ ಪತ್ರಕ್ಕೆ ಈ ಮಳಿಗೆಯ ದಿನಾಂಕ:31-1-97ರ ಪತ್ರದಲ್ಲಿ ಅವರಿಗೆ ಬೇಕಾದ ಔಷಧಿಗಳನ್ನು ಒಬ್ಬ ಜವಾಬ್ದಾರಿಯುತ ಅಧಿಕಾರಿಯನ್ನು ನಿಯೋಜಿಸಿ ಅವರದೇ ಆದ ಸಾರಿಗೆಯ ಮುಖಾಂತರ ಪಡೆದುಕೊಂಡು ಹೋಗಲು ಆದೇಶಿಸಲಾಯಿತು. ಅದಾಗ್ಯೂ ನಮ್ಮ ಕಡೆಯಿಂದಲೇ ಔಷಧಿಗಳನ್ನು ಸರಬರಾಜು ಮಾಡಲು ತಂತಿ ಮುಖಾಂತರ ಅವರು ಪ್ರಾರ್ಥಿಸಿದ್ದರು: ಸಾರಿಗೆ ದರಗುತ್ತಿದೆ ವ್ಯವಸ್ಥೆ ಇಲ್ಲದಿರುವ ಕಾರಣ ಇದು ಸಾಧ್ಯವಾಗದೆಂದು ಅವರಿಗೆ ತಿಳಿಸಿ ಮತ್ತೊಮ್ಮೆ ಅವರೇ ಖುದ್ದಾಗಿ ಒಂದು ಔಷಧಿಗಳನ್ನು ಪಡೆದುಕೊಂಡು ಹೋಗಲು ಸೂಚಿಸಲಾಗಿದೆ.

ಸರ್ಕಾರಿ ಔಷಧಿ ಮಳಿಗೆಯಲ್ಲಿ ಔಷಧಿಗಳನ್ನು ವಿತರಿಸುವಾಗ ಮಾಮೂಲನ್ನು ಪಡೆಯುವ ಬಗ್ಗೆ ಹಾಗೂ ಇದರಿಂದ ಆದ ತೊಂದರೆ ಬಗ್ಗೆ ಯಾವ ದೂರು ಬಂದಿರುವುದಿಲ್ಲ ಭ್ರಷ್ಟಾಚಾರ ವಿಷಯದಲ್ಲಿ ನಿರ್ದಿಷ್ಟ ಪ್ರಕರಣಗಳು ಕಂಡು ಬಂದಲ್ಲಿ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಸಾರಿಗೆ ದರಗುತ್ತಿಗೆಯ ವ್ಯವಸ್ಥೆಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದ್ದು ಸಾರಿಗೆ ದರಗುತ್ತಿಗೆಯನ್ನು ನಿಗಧಿ ಮಾಡಿ ಈ ದಿಸೆಯಲ್ಲಿ ಔಷಧಿಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ದಕ್ಷಿಣಕನ್ನಡ ಜಿಲ್ಲೆ ಇವರು ಇದೇ ಇಪ್ಪತ್ತನೇ ತಾರೀಖಿಗೆ ಆರವತ್ತೇರಡು ಸಾವಿರ ರೂಪಾಯಿಗಳ ಮೌಲ್ಯದ ಔಷಧಿಗಳನ್ನು ಪುನಃ ಕುಂದಾಪುರ ಸಾರ್ವಜನಿಕ ಆಸ್ಪತ್ರೆಗೆ ಸರಬರಾಜು ಮಾಡಲಿದ್ದಾರೆ.